# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1015

ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 24-02-2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸಾರಿಗೆ ಇಲಾಖೆಯ ಅಧಿಕಾರಿಗಳು / ನೌಕರರು ಶಾಮೀಲಾಗಿ ಐಷಾರಾಮಿ ಕಾರುಗಳ ಜೀವಿತಾವಧಿ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸದೇ ನೂರಾರು ಕೋಟಿ ರೂ. ಗಳ ಹಗರಣದಲ್ಲಿ ಭಾಗಿಯಾಗಿರುವ ಕುರಿತು ಸಿ.ಐ.ಡಿ.ಗೆ ವಹಿಸಿ ತನಿಖೆ ಮಾಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲು ಈ ಹಿಂದೆ ಸರ್ಕಾರವು ಭರವಸೆ ನೀಡಿರುವುದು ನಿಜವೇ; | ಈ ಹಿಂದೆ 2022 ನೇ ಸಾಲಿನ 146ನೇ ಅಧಿವೇಶನದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2691ರಲ್ಲಿ ಈ ಪ್ರಕರಣದಲ್ಲಿ ಉನ್ನತ ಮಟ್ಟದ ತನಿಖೆ ಕೈಗೊಳ್ಳಲಾಗುವುದು ಎಂದು ಉತ್ತರ ನೀಡಲಾಗಿತ್ತು.<br><br>147ನೇ ಅಧಿವೇಶನದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 555+512ರಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಪೂರ್ಣವಾಗಿ ಆಡಿಟ್ ನಡೆಸಿ ವರದಿಯನ್ನು ನೀಡುವಂತೆ Principal Accountant General (Audit-I), ಬೆಂಗಳೂರು ಇವರನ್ನು ಕೋರಲಾಗಿದ್ದು, ಮಹಾಲೇಖಪಾಲರ ವರದಿ ಬಂದ ನಂತರ ವರದಿಯನ್ನು ಆಧರಿಸಿ ಸಂಬಂಧಪಟ್ಟ ಅಧಿಕಾರಿ / ನೌಕರರ ವಿರುದ್ಧ ನಿಯಮಾನುಸಾರ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರ ಒದಗಿಸಲಾಗಿರುತ್ತದೆ. |
| ಆ | ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಇಲ್ಲಿಯ ತನಕ ಏನು ಕ್ರಮ ತೆಗೆದುಕೊಂಡಿದೆ; (ವಿವರ ನೀಡುವುದು) | |
| ಇ | ಕ್ರಮ ತೆಗೆದುಕೊಂಡಿಲ್ಲದಿದ್ದಲ್ಲಿ ಕಾರಣವೇನು; (ವಿವರ ನೀಡುವುದು) | |
| ಉ | ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳಿಂದ ಈ ಹಣವನ್ನು ವಸೂಲು ಮಾಡಿ ಅಂತಹ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಲು ಸರ್ಕಾರ ಕ್ರಮಕೈಗೊಳ್ಳುವುದೇ? | ಅದರಂತೆ ಐಷಾರಾಮಿ ಕಾರುಗಳ ಜೀವಿತಾವಧಿ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸದೇ ಇರುವ ಕುರಿತು ಸಂಪೂರ್ಣವಾಗಿ ಆಡಿಟ್ ನಡೆಸಿ ವರದಿಯನ್ನು ನೀಡುವಂತೆ Principal Accountant General (Audit-I) ಇವರಿಗೆ ದಿನಾಂಕ: 12-09-2022 ಮತ್ತು 27-09-2022 ರ ಪತ್ರಗಳ ಮುಖಾಂತರ ಕೋರಲಾಗಿರುತ್ತದೆ. ಅದರಂತೆ Deputy Accountant General / AMG-I ಇವರು ಪತ್ರ ದಿನಾಂಕ:19-10-2022 ರಲ್ಲಿ ಐಷಾರಾಮಿ ಕಾರುಗಳ ಜೀವಿತಾವಧಿ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸದೇ ಇರುವ ವಿಷಯದ ಕುರಿತು ಬೆಂಗಳೂರು ನಗರದ ಎಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ಆಡಿಟ್ ನಡೆಸಲು |

Scanned with Oken Scanner

| | | |
|---|---|---|
| | | ತಂಡವನ್ನು ರಚಿಸಿ, ಆಡಿಟ್ ಅನ್ನು ನಡಸಲಾಗುತ್ತಿದೆ. ಸದರಿ ಆಡಿಟ್ ತಂಡದಿಂದ ಸಂಪೂರ್ಣ ವರದಿಯನ್ನು ಸ್ವೀಕರಿಸಿದ ನಂತರ ನಿಯಮಾನುಸಾರ ಸೂಕ್ತ ಕ್ರಮ ವಹಿಸಲಾಗುವುದು. |

ಟಿಡಿ 16 ಟಿಡಿಕ್ಯೂ 2023

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು.